

ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಮಾಜಸೇವಾ ಸಂಘ (ರಿ) ಸುಳ್ಯ, ದ.ಕ

website :www.sthanikasamjasullia.webs.com

# ಓಂ ಸ್ಥಾನಿಕ ಸಂಪದ





Reg. No : KARKAN 2008/2604!

ಸಂಪುಟ : 7

ಸಂಚಿಕೆ : 07

OFFICE OF POSTING SULLIA MDG POST OFFICE

PTR/117/2015-17 DATE OF POSTING 16TH EVERY MONTH

ಜುಲೈ : 2016

ಪುಟಗಳು : 6


# ಶ್ರೀ ಶ್ರೀ ಜಗದ್ಗುರುಗಳವರ ಅನುಗ್ರಹ ಭಾಷಣ

## ಒಂದು ಸತ್ತ್ವಯುತವಾದ ಅರ್ಪಣೆ

ಹಿಂದಿನ ಸಂಚಿಕೆಯಿಂದ

ಏನಾದರು ವಸ್ತುವನ್ನು ಕೊಡೋಣವೇ? ಬಹಳ ದುಬಾರಿಯಾದ ಹಲವಾರು ವಸ್ತುಗಳನ್ನು ಜನರು ಈಗ ಕೊಳ್ಳುತ್ತಿದ್ದಾರೆ. ಆದರೆ ಭಗವಂತನ ಹತ್ತಿರ, ಕಲ್ಪವೃಕ್ಷ ಬೇಡಿದ್ದನ್ನು ನೀಡುವ ಮರ, ಕಾಮಧೇನು– ಬೇಡಿದ್ದನ್ನು ನೀಡುವ ಹಸು ಪಕ್ಕದಲ್ಲಿಯೇ ಇವೆ. ಇವುಗಳು ನಾವು ಏನು ಬೇಡಿದರೂ ಕೊಡುತ್ತವೆ. ಹಾಗಾಗಿ ಅವನ ಬಳಿ ಇಲ್ಲದಿರುವ ವಸ್ತುಗಳು ಯಾವುದು ಇಲ್ಲ.

ಹಾಗಾದರೆ, ತಂಪಾದ ಗಂಧವನ್ನು ಅರ್ಪಿಸೋಣವೇ? ಇದು ಶಿವನನ್ನು ತಂಪಾಗಿಸುತ್ತದೆ. ಇದು ಸರಿಯಾದ ಅರ್ಪಣೆಯಾಗಿರಬಹುದು. ಆದರೆ ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿದ್ದಾನೆ ಭಗವಂತನಾದ ಶಿವನು. ಇದಕ್ಕಿಂತಲೂ ತಂಪಾದುದು ಯಾವುದು?

ಇದನ್ನೆಲ್ಲಾ ಆಲೋಚಿಸಿ, ಭಗವತ್ಪಾದರು ಒಂದು ನಿರ್ಧಾರಕ್ಕೆ ಬಂದರು– ' ಭಗವಂತನೇ, ನಿನಗೆ ಅರ್ಪಿಸಲು ನನಗೆ ಯಾವುದೇ ಯೋಗ್ಯತೆ ಇಲ್ಲ. ಆದರೆ ಒಂದು ವಸ್ತುವನ್ನು ನಿನಗೆ ನಾನು ಅರ್ಪಿಸುತ್ತೇನೆ– ಅದೇನೆಂದರೆ ನನ್ನ ಮನಸ್ಸು'.

ಅದಕ್ಕಿಂತಲೂ ಅರ್ಪಿಸಲು ಯೋಗ್ಯವಾದ ವಸ್ತು ಮತ್ತೊಂದಿಲ್ಲ. ಶ್ರೀ ಶಂಕರರು ಹೇಳಿರುವ ಹಾಗೆ, ಭಗವಂತನ ಚರಣಗಳಲ್ಲಿ ಮನಸ್ಸನ್ನು ತೊಡಗಿಸಿದರೆ, ಅದಕ್ಕಿಂತಲೂ ಮಿಗಿಲಾದದ್ದು ಇಲ್ಲ, ಇದರಿಂದ ಮೋಕ್ಷ ದೊರಕುತ್ತದೆ. ಬಹಳ ಜನ ಪ್ರಶ್ನಿಸಬಹುದು– 'ಮನಸ್ಸನ್ನು ದೇವರಿಗೆ ಸಮರ್ಪಿಸಲು ಸಾಧ್ಯವಿಲ್ಲ. ಅದು ದೇಹದಿಂದ ಹೊರಗಿದ್ದರೆ ತೆಗೆದು ದೇವರ ಪಾದಗಳಲ್ಲಿ ಇಡಬಹುದಿತ್ತು. ಭೌತಿಕವಾಗಿ ಅದನ್ನು ಮಾಡಲಾಗದ ಕಾರಣ, ಮನಸ್ಸನ್ನು ಈಶ್ವರನಿಗೆ ಸಮರ್ಪಿಸುವುದು ಹೇಗೆ?' ಅದಕ್ಕುತ್ತರವೇನೆಂದರೆ ಈಶ್ವರನನ್ನು ಸದಾ ಮನದಲ್ಲಿ ಚಿಂತಿಸುವುದು. ಹಾಗಾದರೆ ದೇವಾಲಯದಿಂದ ಈಶ್ವರನನ್ನು ತಂದು ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳುವುದೇ? ಹಾಗಲ್ಲ. ಅರ್ಥವೇನೆಂದರೆ, ಈಶ್ವರನ ಚಿಂತನೆಯನ್ನು ಬಿಟ್ಟು ನಾವು ಏನನ್ನೂ ಮನದಲ್ಲಿ ಯೋಚಿಸಬಾರದು.

ಈ ರೀತಿಯಾದ ಸ್ಥಿತಿ ತಲುಪಲು ಸಾಧ್ಯವೇ? ಮನಸ್ಸಿದ್ದಲ್ಲಿ ಮಾರ್ಗವಿದೆ, ಇದು ಗೊತ್ತಿರುವ ವಿಷಯ. ನಮ್ಮ ಮನಸ್ಸನ್ನು ಗಟ್ಟಿ ಮಾಡಿಕೊಂಡರೆ, ಆ ಮಾರ್ಗ ತಿಳಿಯುತ್ತದೆ. ಕೃಷ್ಣನ ಕಾಲದಲ್ಲಿ ಗೋಪಿಯರು ಅವನ ಬಗ್ಗೆ ಸದಾ ಯೋಚಿಸುತ್ತಿದ್ದರು ಎಂದು ಭಾಗವತದಲ್ಲಿ ನಾವು ಓದಿದ್ದೇವೆ.

ವಿಕ್ರೇತುಕಾಮಾ ಕಿಲ ಗೋಪಬಾಲಾ
ಮುರಾರಿಪಾದಾರ್ಪಿತಚಿತ್ತವೃತ್ತಿಃ ।
ದಧ್ಯಾಧಿಕಂ ಮೋಹವಾದವೋಚತ್
ಗೋವಿಂದ ದಾಮೋದರಮಾಧವೇತಿ ॥

ಮುಂದುವರಿಯುವುದು........


ಪತ್ರಿಕೆಯ ಪ್ರಾಯೋಜಕರು

ಶ್ರೀಮತಿ ಉಮಾಜೋಷಿ ಮತ್ತು ಮನೆಯವರು

ಸೂರ್ತಿಲ, ಸುಳ್ಯ –574239




## ಸಂಪಾದಕೀಯ


ಡಾ.ಸದಾಶಿವ ರಾವ್

sadashiva.dr@gmail.com




ವಿಮಾನವೊಂದರಲ್ಲಿ ನಾಲ್ಕು ಮಂದಿ ಪ್ರಯಾಣಿಸುತ್ತಿದ್ದರು. ಒಬ್ಬ ಪೈಲಟ್,ಒಬ್ಬ ರಾಜಕಾರಣಿ, ಒಬ್ಬ ಶಿಕ್ಷಕ, ಮತ್ತೊಬ್ಬ ವಿದ್ಯಾರ್ಥಿ. ಪಯಣ ಮಧ್ಯದಲ್ಲಿ ಪೈಲೆಟ್, 'ವಿಮಾನದಲ್ಲಿ ಏನೋ ದೋಷ ಕಾಣಿಸಿಕೊಂಡಿದೆ. ಇನ್ನು ಅದನ್ನು ನಡೆಸುವ ಹಾಗಿಲ್ಲ. ನಮ್ಮಲ್ಲಿರುವುದು ಮೂರೇ ಪ್ಯಾರಾಚೂಟ್‌ಗಳು. ಪೈಲಟ್ ಆದ್ದರಿಂದ ನಾನು ಮಹತ್ವದ ವ್ಯಕ್ತಿ ಎಂದು ಹೇಳಿ ಒಂದು ಪ್ಯಾರಾಚೂಟ್‌ನ್ನು ತೆಗೆದುಕೊಂಡು ವಿಮಾನದಿಂದ ಕೆಳಗೆ ಹಾರಿಯೇ ಬಿಟ್ಟ. ಇದನ್ನು ಕೇಳಿ ರಾಜಕಾರಣಿ ಕೂಗಿಕೊಂಡ . ' ನಾನು ಮಹತ್ವದ ವ್ಯಕ್ತಿಯೇ, ನಾನು ರಾಜಕಾರಣಿ' ಅವನು ಮತ್ತೊಂದನ್ನು ತೆಗೆದುಕೊಂಡು ಹಾರಿದ.

ಶಿಕ್ಷಕ ಹೇಳಿದ ' ನಾನು ನನ್ನ ಜೀವನವನ್ನು ಪೂರ್ಣವಾಗಿ ಕಳೆದಿದ್ದೇನೆ. ನೀನಿನ್ನೂ ಯುವಕ. ಮೂರನೆಯ ಪ್ಯಾರಾಚೂಟನ್ನು ತೆಗೆದುಕೊಂಡು ಕೆಳಗೆ ಜಿಗಿ'.

ವಿದ್ಯಾರ್ಥಿ ಹೇಳಿದ, 'ಸರ್ ಇಲ್ಲಿ ಎರಡು ಪ್ಯಾರಾಚೂಟ್‌ಗಳಿವೆ.ಆದ್ದರಿಂದ ನಾವಿಬ್ಬರೂ ಬದುಕುಳಿಯಬಹುದು'.

ಶಿಕ್ಷಕ ಅಚ್ಚರಿಯಿಂದ ಕೇಳಿದ, 'ಅದು ಹೇಗೆ ಸಾಧ್ಯ? ಅಲ್ಲಿದ್ದುದು ಮೂರೇ ಪ್ಯಾರಾಚೂಟ್‌ಗಳು. ಎರಡನ್ನು ಅವರಿಬ್ಬರೂ ಒಯ್ದಾಗಿದೆ. ಆದ್ದರಿಂದ ಒಂದೇ ಉಳಿದಿರಬೇಕಲ್ಲ?'

ವಿದ್ಯಾರ್ಥಿ ಉತ್ತರಿಸಿದ, ಆ ರಾಜಕಾರಣಿ ತೀರ ಅವಸರದಲ್ಲಿದ್ದ. ನನ್ನ ಸ್ಕೂಲ್ ಬ್ಯಾಗನ್ನೇ ಹಿಡಿದುಕೊಂಡು ಕೆಳಗೆ ಹಾರಿದ'

ನೀವು ಒತ್ತಡದ ಸ್ಥಿತಿಯಲ್ಲಿದಾಗ ವಿಫಲರಾಗುವ ಸಂಭವ ಹೆಚ್ಚು. ಯಾವ ಕೆಲಸವನ್ನೇ ಮಾಡುತ್ತಿರಲಿ, ರಿಲಾಕ್ಸ್ ಆಗಿರಲು ಅಭ್ಯಾಸ ಮಾಡಿ. ಹಾಗೆಯೇ ನಿಮ್ಮ ಅಂತರಂಗ ಸಂತೋಷದಲ್ಲಿರಲಿ. ಈ ಸ್ಥಿತಿಯನ್ನು ಸಾಧಿಸುವುದು ಹೇಗೆ? ಸುಮ್ಮನೆ ಸಂತೋಷವಾಗಿರಲು ಕಲಿಯಿರಿ.

ಅಂತರಂಗ ಸಂತೋಷದಲ್ಲಿರಲು ನಾವು ಸಾತ್ವಿಕರಾಗಲು ಅಭ್ಯಾಸ ಮಾಡಬೇಕು. ಅದ್ಯಾತ್ಮಿಕ ಸಾಧನೆ ಮಾಡುವುದರಿಂದ ಅಂತರಂಗದ ಸಾತ್ವಿಕತೆ ಪಡೆಯಲು ಸಾಧ್ಯ. ದಿನನಿತ್ಯ ಸಂಧ್ಯಾವಂದನೆ, ದೇವರ ಪೂಜೆ, ಗುರುಹಿರಿಯರಿಗೆ ಗೌರವ, ಕಿರಿಯರಿಗೆ ಪ್ರೀತಿ ಪ್ರೇಮ ತೋರುವುದರಿಂದ ಸಾತ್ವಿಕ ಮನೋಭಾವ ಉಂಟಾಗುತ್ತದೆ. ಆಗ ಮಾನಸಿಕ ಒತ್ತಡ ನಿವಾರಣೆಯಾಗಿ ಮನಸ್ಸು ಸಂತೋಷದಲ್ಲಿರುತ್ತದೆ. ನೀವೂ ಸಾಧಿಸಿ ನೋಡಿ!

## ಮಾಸಿಕ ಶುಭದಿನಗಳು

### ದುರ್ಮುಖ ಸಂವತ್ಸರದ ದಕ್ಷಿಣಾಯನ ಗ್ರೀಷ್ಮಋತು ಆಷಾಢ ಮಾಸ

### 17–07–2016 ರಿಂದ 16–08–2016 ರವರೆಗೆ

17–07–2016 - ಕರ್ಕಾಟಕ ಸಂಕ್ರಮಣ (ಆಟಿ)

19–07–2016 – ಗುರುಪೂರ್ಣಿಮ

02–08–2016 – ಆಟಿ ಅಮವಾಸ್ಯೆ

12–08–2016 – ವರ ಮಹಾಲಕ್ಷ್ಮೀ ವೃತ

15–08–2016 – ಸ್ವಾತಂತ್ರ ದಿನಾಚರಣೆ

16–08–2016 – ಸಿಂಹ ಸಂಕ್ರಮಣ

## ಗ್ರಂಥಾವಲೋಕನ

ಆಧ್ಯಾತ್ಮಿಕ ಸಾಧನ ಮಾರ್ಗದಲ್ಲಿ ವೇದಮಂತ್ರಗಳ ನಿತ್ಯಪಾರಾಯಣಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಮಂತ್ರಗಳನ್ನು ಸ್ವರಕ್ರಮವನ್ನನ್ನುಸರಿಸಿ ಉಚ್ಚರಿಸಬೇಕು. ಇದರಿಂದ ಮನಸ್ಸು ಉದಾತ್ತಭಾವಕ್ಕೇರುವುದು. ವೇದಮಂತ್ರಗಳನ್ನು ಇರುವೆಗಳು ಮೆಲ್ಲಗೆ ಚಲಿಸುವಂತೆ, ತ್ವರೆಪಡದೆ ಉಚ್ಚರಿಸಿದರೆ ಅಧ್ಯಯನವು ರಸವತ್ತಾಗುವುದೆಂದು ನಾರದೀಯ ಪುರಾಣದಲ್ಲಿ ಹೇಳಿದೆ, ಅಸ್ಫುಟವಾಗದಂತೆ ಸ್ಥಾನಾದಿಗಳ ಸ್ವಭಾವಾನುಗುಣವಾಗಿ ವರ್ಣಗಳನ್ನು ಪ್ರಯೋಗಿಸಬೇಕು. ಚೆನ್ನಾಗಿ ವರ್ಣಗಳನ್ನುಚ್ಚರಿಸುವವನು ಅದರಿಂದ ಬ್ರಹ್ಮಲೋಕವನ್ನು ಹೊಂದಿ ಪೂಜ್ಯನಾಗುವನು. " ಸಮ್ಯಕ್ ವರ್ಣಪ್ರಯೋಗೇಣ ಬ್ರಹ್ಮಲೋಕೇ ಮಹೀಯತೇ" ಎಂದು ಸನಂದನ ಮುನಿಗಳು ನಾರದ ಮಹರ್ಷಿಗಳಿಗೆ ವೇದಾಧ್ಯಯನದ ಮಹಿಮೆಯನ್ನು ತಿಳಿಸಿದ್ದಾರೆ.

ಪ್ರತಿದಿನವೂ ಪ್ರಾತಃಕಾಲದಲ್ಲಿ ಸ್ನಾನಾದಿಗಳಿಂದ ಪರಿಶುದ್ಧನಾಗಿ ನಿಯಮನಿಷ್ಠೆಗಳಿಂದ ವೇದಾಧ್ಯಯನವನ್ನು ಮಾಡಬೇಕು. ವೇದ ಮಂತ್ರಗಳನ್ನು ನಿತ್ಯಪಾರಾಯಣ ಮಾಡತಕ್ಕವರಿಗೆ ಉಪಯುಕ್ತವಾಗುವಂತೆ " ಸಸ್ವರ ವೇದಮಂತ್ರಾಃ" ಎಂಬ ಪುಸ್ತಕವನ್ನು ಪ್ರಕಟಿಸಲಾಗಿದೆ. ಈ ಗ್ರಂಥದಲ್ಲಿ ದಶಶಾಂತಿಮಂತ್ರಗಳು, ಕೃಷ್ಣಯಜುರ್ವೇದ ಭಾಗದಿಂದ ತೈತ್ತಿರೀಯೋಪನಿಷತ್, ಮಹಾನಾರಾಯಣೋಪನಿಷತ್, ಸೂರ್ಯೋಪಾಸನ ವಿಧಿಗೆ ಉಪಯುಕ್ತವಾದ ಅರುಣಪ್ರಶ್ನೆ ಮತ್ತು ದೇವತಾರ್ಚನೆಗೆ ಬಳಸುವ ಪುರುಷಸೂಕ್ತ , ನಾರಾಯಣಸೂಕ್ತವೇ ಮುಂತಾದ ಮುಖ್ಯ ಸೂಕ್ತಗಳನ್ನು ಸಂಗ್ರಹಿಸಲಾಗಿದೆ. ಶ್ರೀ ರುದ್ರಪ್ರಶ್ನೆ, ಚಮಕಪ್ರಶ್ನೆ, ಲಘುನ್ಯಾಸ, ಪಂಚಾಮೃತಸ್ನಾನ, ಮಲಾಪಕರ್ಷಣಸ್ನಾನಮಂತ್ರಗಳನ್ನೂ ಸೇರಿಸಿದೆ. ಶುಕ್ಲಯಜುರ್ವೇದ ಭಾಗದಿಂದ ಬೃಹದಾರಣ್ಯಕೋಪನಿಷತ್ತಿನ " ಜ್ಯೋತಿರ್ಬ್ರಾಹ್ಮಣ" ಮತ್ತು ಈಶಾವಾಸ್ಯೋಪನಿಷತ್ ಮಂತ್ರಗಳನ್ನು ಸಂಗ್ರಹಿಸಲಾಗಿದೆ. ಅಥರ್ವಣವೇದ ಭಾಗದಿಂದ ನಾರಾಯಣೋಪನಿಷತ್, ಗಣೇಶಾಥರ್ವಶೀರ್ಷಮ್ ಮತ್ತು ಸೂರ್ಯೋಪನಿಷತ್ ಮಂತ್ರಗಳನ್ನು ಸೇರಿಸಲಾಗಿದೆ. ಋಗ್ವೇದ ಭಾಗದಿಂದ ಐತರೇಯೋಪನಿಷತ್, ಶ್ರೀಸೂಕ್ತ, ಸರಸ್ವತೀಸೂಕ್ತವೇ ಮುಂತಾದ ನಮ್ಮ ನಿತ್ಯಕರ್ಮಗಳಿಗೆ ಉಪಯುಕ್ತವಾದ ಮುಖ್ಯ ಸೂಕ್ತಗಳನ್ನು ಸೇರಿಸಿದೆ. ಶಾಂತಿ ಸೂಕ್ತಗಳು, ಅಭಿಷೇಕಸೂಕ್ತಗಳು ಮತ್ತು ಪ್ರಸಿದ್ಧವಾದ ಪವಮಾನ ಪಂಚಸೂಕ್ತಗಳನ್ನೂ ಸೇರಿಸಲಾಗಿದೆ. ನಂತರ ಸಾಮಗಾನವನ್ನು ಕೊಡಲಾಗಿದೆ. ಪ್ರಸಿದ್ಧವಾದ ಶ್ರೀ ಗಾಯತ್ರಿಸಾಮ, ಶ್ರೀ ಸುಬ್ರಹ್ಮಣ್ಯಸಾಮ, ಬ್ರಹತ್‌ಸಾಮವೇ ಮುಂತಾಗಿ ಹನ್ನೊಂದು ಸಾಮಗಾನಮಂತ್ರಗಳನ್ನು ಈ ಹೊಸ ವಿಸ್ತೃತ ಸಂಸ್ಕರಣದಲ್ಲಿ ಕೊಡಲಾಗಿದೆ. ಕೊನೆಯಲ್ಲಿ ವೇದಾಭ್ಯಾಸಕ್ರಮವನ್ನು ಸಂಕ್ಷಿಪ್ತವಾಗಿ ಕೊಟ್ಟಿದೆ.

ವೇದಾಧ್ಯಯನದ ಮಹಿಮೆಯನ್ನು ವರಾಹಪುರಾಣದಲ್ಲಿ ವರ್ಣಿಸಲಾಗಿದೆ.

ಪದಕ್ರಮವಿಶೇಷಜ್ಞೋ ವರ್ಣಕ್ರಮವಿಚಕ್ಷಣಃ।
ಸ್ವರಮಾತ್ರಾವಿಶೇಷಜ್ಞೋ ಗಚ್ಛೇದಾಚಾರ್ಯಸಂಪದಮ್॥
ಸಂಹಿತಾಪಾಠತಃ ಪುಣ್ಯಂ ದ್ವಿಗುಣಂ ಪದಪಾಠತಃ।
ತ್ರಿಗುಣಂ ಕ್ರಮಪಾಠೇನ ಜಟಾಪಾಠೇನ ಷಡ್ಗುಣಮ್॥

ಇದರ ಅರ್ಥ ಹೀಗಿದೆ: " ಸಂಹಿತಾ, ಪದಪಾಠ , ಕ್ರಮಪಾಠ, ವರ್ಣೋಚ್ಚಾರಣೆ, ಸ್ವರ, ಮಾತ್ರ, ಇವುಗಳನ್ನು ಚೆನ್ನಾಗಿ ತಿಳಿದವನು ಆಚಾರ್ಯನೆನಿಸಿಕೊಳ್ಳುವನು. ಸಂಹಿತೆಯನ್ನು ಪೂರ್ಣವಾಗಿ ಅಧ್ಯಯನ ಮಾಡುವುದರಿಂದ ಅಧಿಕ ಪುಣ್ಯ ಬರುತ್ತದೆ. ಪದಪಾಠಾಧ್ಯಯನದಿಂದ ಅದರ ಎರಡರಷ್ಟೂ, ಕ್ರಮಪಾಠದಿಂದ ಮೂರರಷ್ಟೂ, ಜಟಾಪಾಠದಿಂದ ಆರರಷ್ಟೂ ಪುಣ್ಯವು ಲಭಿಸುತ್ತದೆ."



### ಶೃಂಗೇರಿಯಿಂದ ಕಡಬಕ್ಕೆ ಶ್ರೀ ಶಂಕರಾಚಾರ್ಯರ ಪ್ರತಿಮೆಯ ಕೊಡುಗೆ

ಕಡಬದಲ್ಲಿರುವ ಶ್ರೀ ಶ್ರೀ ಕಂಠಸ್ವಾಮಿ, ಶ್ರೀ ಮಹಾಗಣಪತಿ ದೇವಸ್ಥಾನಕ್ಕೆ ಸುಮಾರು 1200 ವರ್ಷಗಳ ಹಿಂದೆ ಭಗವತ್ಪಾದ ಆದಿಜಗದ್ಗುರು ಶ್ರೀ ಶಂಕರಾಚಾರ್ಯರು ಆಗಮಿಸಿದ್ದು ಕೆಲಕಾಲ ತಂಗಿ ಶ್ರೀ ಶ್ರೀ ಕಂಠಸ್ವಾಮಿ ದೇವರನ್ನು ಆರಾಧಿಸಿದ್ದರೆಂದು ಇತಿಹಾಸವಿದೆ.

ನಾದುರಸ್ತಿಯಲ್ಲಿದ್ದ ಈ ದೇವಸ್ಥಾನವನ್ನು ಅಧ್ಯಕ್ಷರಾದ ಮೇಲೆ ಕುಂಬಾಟ್ ಗೋಪಾಲರಾವ್ ಊರವರ ಸಹಕಾರದಿಂದ ಜೀರ್ಣೋದ್ಧಾರಗೊಳಿಸಿ,ಬ್ರಹ್ಮಕಲಶ ನೆರವೇರಿಸಿದರು. ಈ ಸಂದರ್ಭ ಶ್ರೀ ಶಂಕರಾಚಾರ್ಯರ ಪ್ರತಿಮೆಯೊಂದನ್ನು ಅವರು ಬಂದ ನೆನಪಿಗಾಗಿ ಇಡಬೇಕೆಂದು ಸಂಕಲ್ಪಿಸಿದ್ದರು.

ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರಲ್ಲಿ ಈ ವಿಚಾರ ಅರಿಕೆ ಮಾಡಿ ಮನವಿ ಸಲ್ಲಿಸಿದ್ದರು.ಶೃಂಗೇರಿ ಗುರುಗಳು ಸಂತೋಷದಿಂದ ಪ್ರತಿಮೆ ನೀಡುವುದಾಗಿ ತಿಳಿಸಿದಂತೆ ಸದ್ರಿ ಪ್ರತಿಮೆಯು ರಾಜಸ್ಥಾನದಿಂದ ಅಮೃತಶಿಲೆಯಲ್ಲಿ ತಯಾರಿಸಲ್ಪಟ್ಟು ಕಡಬಕ್ಕೆ ದಿನಾಂಕ ಜುಲೈ 1 ರಂದು ಬಂದಿರುತ್ತದೆ. ಮೌಢ್ಯವಾಗಿದ್ದ ಕಾರಣ ಅಧ್ಯಕ್ಷರ ಮನೆಯಲ್ಲಿರಿಸಿ ತಾ06-07-2016 ರಂದು ಅಲ್ಲಿಂದ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಿ ಮಂಟಪದಲ್ಲಿರಿಸಿ ಪೂಜಾಧಿಗಳನ್ನು ನೆರವೇರಿಸಲಾಯಿತು.

ವರದಿ: ಗೋಪಾಲ. ರಾವ್.ಕೆ
ಕಡಬ

---

### ಚಿಂತನೆ

ಸಾನಂದಂ ಸದನಂ ಸುತಾಶ್ಚ ಸುಧಯಃ ಕಾಂತಾಪ್ರಿಯಾಲಾಪಿನೀ
ಇಚ್ಛಾಪೂರ್ತಿಧನಂ ಸ್ವಯೋಷಿರತಿಃ ಸ್ವಾ ಜ್ಞಾಪರಾಃ ಸೇವಕಾಃ।
ಆತಿಥ್ಯಂ ಶಿವಪೂಜನಂ ಪ್ರತಿದಿನಂ ಮಿಷ್ಟಾನ್ನಪಾನಂ ಗೃಹೇ
ಸಾಧೋಃ ಸಂಗಮುಪಾಸತೇ ಚ ಸತತಂ ಧನ್ಯೋ ಗೃಹಸ್ಥಾ, ಶ್ರಮಃ॥

ತಾತ್ಪರ್ಯ: ಯಾವ ನಿವಾಸದಲ್ಲಿ ಸದಾ ಸಂತಸದ ಅಲೆಗಳು ಉಕ್ಕುತ್ತವೆಯೋ, ಮಕ್ಕಳೆಲ್ಲರೂ ಬುದ್ಧಿವಂತರಾಗಿರುವರೋ, ಪ್ರಿಯವಾಗಿ ಮಾತನಾಡುವ ಪತ್ನಿಯಿರುವಳೋ, ಇಷ್ಟಾರ್ಥಗಳನ್ನು ಈಡೇರಿಸುವಷ್ಟು ಧನ-ಸಂಪತ್ತುಗಳಿವೆಯೋ, ಪತ್ನಿಯಲ್ಲಿ ಪ್ರೇಮಾನುರಾಗಗಳನ್ನು ಹೊಂದಿರುವನೋ, ಯಜಮಾನನ ಆಜ್ಞಾಪಾಲನೆ ಮಾಡುವ ಸೇವಕರಿರುವರೋ, ಅತಿಥಿಗಳ ಆದರ ಸತ್ಕಾರಗಳು ಮತ್ತು ಭಗವಾನ್ ಶಂಕರನ ಪೂಜೆ -ಪುರಸ್ಕಾರಗಳು ನಡೆಯುತ್ತವೆಯೋ, ನಿತ್ಯವೂ ರುಚಿಕರವಾದ ಭೋಜನ ಮತ್ತು ಪೇಯಗಳ ವ್ಯವಸ್ಥೆಯಿರುತ್ತವೆಯೋ ಮತ್ತು ಸಾಧು- ಸತ್ಪುರುಷರ ನಿರಂತರ ಸತ್ಸಂಗಗಳು ನಡೆಯುತ್ತವೆಯೋ ಇಂಥ ಒಂದು ಗೃಹಸ್ಥಾಶ್ರಮ ನಿಜಕ್ಕೂ ಧನ್ಯ.

ವಿವರಣೆ: ಒಂದು ಆದರ್ಶ ಮತ್ತು ಸುಂದರ ಬದುಕಿನ ಕನಸು ಇದಾಗಿದೆ. ಇಂಥ ಆದರ್ಶ ಸಂಸಾರಗಳು ನೋಡಲು ಸಿಗುವುದು ವಿರಳ.ಸರ್ವಜ್ಞನೂ ಕೂಡ ಇಂಥ ಇಂಥದೇ ಸುಖಸಂಸಾರದ ಜೀವನವನ್ನು ಕುರಿತು " ಬೆಚ್ಚನೆಯ ಮನೆಯಾಗಿ, ವೆಚ್ಚಕ್ಕೆ ಹೊನ್ನಾಗಿ, ಇಚ್ಛೆಯನರಿತು ನಡೆವ ಪತ್ನಿಯಿದ್ದಡೆ, ಸರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ" ಎಂದು ಹೇಳುತ್ತಾನೆ.

---

### ಜುಲೈ ತಿಂಗಳ ಸಭೆಯ ವರದಿ

ನಮ್ಮ ಸಂಘದ ಮಾಸಿಕ ಸಭೆಯು ತಾ-07-07-16 ನೇ ಗುರುವಾರ ಸಂಜೆ 6.30 ಕ್ಕೆ ನಮ್ಮ ಸಂಘದ ಕಛೇರಿಯಲ್ಲಿ ಜರುಗಿತು. ಅಧ್ಯಕ್ಷರಾದ ಪಿ. ಭಾಸ್ಕರರಾವ್ ರವರು ಅಧ್ಯಕ್ಷತೆ ವಹಿಸಿದ್ದರು. ಸುಳ್ಯ ರೋಟರಿ ಕ್ಲಬ್ಬಿನ ಅಧ್ಯಕ್ಷರಾಗಿ ತುದಿಯಡ್ಕ ಗಿರಿಜಾಶಂಕರರು ಮತ್ತು ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ತುದಿಯಡ್ಕ ಹರಪ್ರಸಾದರು ಪದಗ್ರಹಣ ಮಾಡಿದ ಬಗ್ಗೆ ಅಭಿನಂದನೆ ಸಲ್ಲಿಸಲಾಯಿತು. ಹೆಬ್ಬೂರು ಕೋದಂಡಾಶ್ರಮದ ಪೀಠಾಧಿಪತಿಗಳಾದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಗಳ ಚಾತುರ್ಮಾಸ್ಯ ಗುರುದರ್ಶನ ಭೇಟಿಯನ್ನು ಜುಲೈ 24 ರಂದು ಕೈಗೊಳ್ಳುವುದಾಗಿ ತೀರ್ಮಾನಿಸಲಾಯಿತು. ಆಗಸ್ಟ್ 21 ರಂದು ನಡೆಯುವ ಶೃಂಗೇರಿ ಗುರುಗಳ ಗುರುದರ್ಶನ ಯಾತ್ರೆಯ ಬಗ್ಗೆ ಚರ್ಚಿಸಲಾಯಿತು. ಕಾರ್ಯದರ್ಶಿ ಕೃಷ್ಣರಾವ್ ನಾವೂರು ಧನ್ಯವಾದ ಸಲ್ಲಿಸುವುದರೊಂದಿಗೆ ಸಭೆಗೆ ವಿರಾಮ ಕೋರಲಾಯಿತು.

## ಹೆಬ್ಬೂರು ಪ್ರಕಟಣೆ



ಆತ್ಮೀಯ ಸದ್ಭಕ್ತರೇ,

ಪರಮಪೂಜ್ಯ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳವರು, ಈ ದುರ್ಮುಖಿ ಸಂವತ್ಸರದ ಚಾತುರ್ಮಾಸ್ಯ ವ್ರತವನ್ನು ಭಕ್ತ-ಶಿಷ್ಯ ಜನರ ಅಪೇಕ್ಷೆ ಮೇರೆಗೆ,

ಶ್ರೀ ಘನಪುರೀ ಸಂಸ್ಥಾನ ಕೋದಂಡಾಶ್ರಮ ಮಠ, ತುಮಕೂರು ತಾಲ್ಲೂಕು ಇಲ್ಲಿ ಆಚರಿಸಲು ಸಂಕಲ್ಪಿಸಿರುತ್ತಾರೆ.

ತಾವೆಲ್ಲರೂ ಕುಟುಂಬ ಸಮೇತರಾಗಿ ಹಾಗೂ ಬಂಧು ಮಿತ್ರರೊಂದಿಗೆ ಈ ಸಂದರ್ಭದಲ್ಲಿ ಭಾಗವಹಿಸಿ, ಶ್ರೀ ಕಾಮಾಕ್ಷೀ ಶಾರದಾಂಬಾ ಕೃಪೆಗೂ ಹಾಗೂ ಶ್ರೀ ಮಹಾಸ್ವಾಮಿಗಳವರ ಪರಮಾನುಗ್ರಹಕ್ಕೂ ಪಾತ್ರರಾಗಬೇಕಾಗಿ ಕೋರುತ್ತೇವೆ.

ಸಮಾಜಬಾಂಧವರು ಮತ್ತು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಬೇಕೆಂದು ವಿಜ್ಞಾಪನೆ. ದಿನಾಂಕ 24-07-2016 ರಿಂದ 31-07-2016 ರ ಪರ್ಯಂತ ಋಕ್ಸಂಹಿತಾ ಯಾಗ ಶ್ರೀ ಮಠದಲ್ಲಿ ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಲೋಕಕಲ್ಯಾಣಾರ್ಥ ಋಕ್(ಶಾಕಲ ಶಾಖೆ) ಸಂಹಿತಾ ಯಾಗ ನೆರವೇರಲಿದೆ. ಈ ಮಂಗಳ ಮಹೋತ್ಸವಕ್ಕೆ ತಾವು ಸಕುಟುಂಬರಾಗಿ ಆಗಮಿಸಿ ವೇದನಾರಾಯಣನ ಮತ್ತು ಶ್ರೀ ಕಾಮಾಕ್ಷೀ- ಶಾರದಾಂಬೆಯ ಶ್ರೀಮುಡಿ ಪ್ರಸಾದವನ್ನು ಸ್ವೀಕರಿಸಿ ಮಹಾಸ್ವಾಮಿಗಳವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಕೋರುತ್ತೇವೆ.

ವಿಶ್ವಸ್ತ ಮಂಡಳಿ ಶ್ರೀ ಮಠ, ಹೆಬ್ಬೂರು

## ಸುಳ್ಯ ತಾ.ಕ.ಸಾ.ಪ ಅಧ್ಯಕ್ಷರಾಗಿ ಡಾ। ಹರಪ್ರಸಾದ್ ತುದಿಯಡ್ಕ ನೇಮಕ



ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರನ್ನಾಗಿ ಸುಳ್ಯ ಚೆನ್ನಕೇಶವ ದೇವಸ್ಥಾನದ ಅನುವಂಶಿಕ ಮೊಕ್ತೇಸರ ಡಾ। ಹರಪ್ರಸಾದ್ ತುದಿಯಡ್ಕರನ್ನು ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಪ್ರದೀಪ್ ಕುಮಾರ್ ಕಲ್ಕೂರು ನೇಮಕ ಮಾಡಿದ್ದಾರೆ.

ಡಾ। ಹರಪ್ರಸಾದರು ಅಜ್ಜಾವರ ಗ್ರಾಮದ ತುದಿಯಡ್ಕ ವಿಷ್ಣಯ್ಯ- ಅರುಂಧತಿಯವರ ಹಿರಿಯ ಪುತ್ರ, ಸುಳ್ಯ ಚೆನ್ನಕೇಶವ ದೇವಸ್ಥಾನದ ಅನುವಂಶಿಕ ಮೊಕ್ತಸರರಾದ್ದ ತಂದೆ ವಿಷ್ಣಯ್ಯರ ನಿಧನದ ಬಳಿಕ ಡಾ। ಹರಪ್ರಸಾದರು ಮೊಕ್ತೇಸರರಾಗಿ ಜವಾಬ್ಧಾರಿ ನಿಭಾಯಿಸುತ್ತಿದ್ದಾರೆ.

ಬೂಡು-ಕೇರ್ಪಳ ಪನ್ನೆಬೀಡು ಭಗವತಿ ಕ್ಷೇತ್ರದ ಮುಖ್ಯಸ್ಥರಾಗಿ,ಸಂಸ್ಕೃತ ಪರಿಷತ್ ಸಂಚಾಲಕರಾಗಿ, ಸುಳ್ಯ ರೋಟರಿ ಚಾರಿಟೇಬಲ್ ಟ್ರಸ್ಟಿನ ಟ್ರಸ್ಟಿಯಾಗಿ, ಸುಳ್ಯ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಮಾಜ ಸೇವಾ ಸಂಘದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಇವರು ಸುಳ್ಯ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿಯೂ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗಿಸಿ ಕೊಂಡಿದ್ದರು.



## ಅಭಿನಂದನೆಗಳು

ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಮಾಜ ಸೇವಾ ಸಂಘ (ರಿ) ಸುಳ್ಯ ಇದರ ಉಪಾಧ್ಯಕ್ಷರಾದ, ಶ್ರೀ ಚೆನ್ನಕೇಶವ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರರಾದ, ಹಿರಿಯ ಸಾಹಿತಿಗಳಾಗಿದ್ದ ತುದಿಯಡ್ಕ ವಿಷ್ಣುಯ್ಯನವರ ಹಿರಿಯ ಪುತ್ರ ಡಾ। ಹರಪ್ರಸಾದ್ ತುದಿಯಡ್ಕ ಇವರು ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಪದಗ್ರಹಣ ಮಾಡಿರುತ್ತಾರೆ. ನಮ್ಮ ಸಂಘವು ಹೆಮ್ಮೆಯಿಂದ ಶ್ರೀಯುತರನ್ನು ಅಭಿನಂದಿಸುತ್ತದೆ.



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಮಾಜ ಸೇವಾ ಸಂಘ (ರಿ) ಸುಳ್ಯ ಇದರ ಮಾಜಿ ಕಾರ್ಯದರ್ಶಿಗಳಾದ, ಶ್ರೀಯುತ ಗಿರಿಜಾಶಂಕರ ತುದಿಯಡ್ಕ ಇವರು ಸುಳ್ಯದ ಪ್ರತಿಷ್ಠಿತ ರೋಟರಿ ಸಂಸ್ಥೆಯ ಅಧ್ಯಕ್ಷರಾಗಿ ಪದಗ್ರಹಣ ಮಾಡಿರುತ್ತಾರೆ. ಇವರು ಶ್ರೀ ಚೆನ್ನಕೇಶವ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರರಾಗಿದ್ದ ತುದಿಯಡ್ಕ ವಿಷ್ಣಯ್ಯನವರ ಸುಪುತ್ರರಾಗಿರುತ್ತಾರೆ. ನಮ್ಮ ಸಂಘವು ಹೆಮ್ಮೆಯಿಂದ ಅಭಿನಂದಿಸುತ್ತದೆ.

## ಚಮತ್ಕಾರಿಕ ಪ್ರಶ್ನೆಗಳು

1. ಇರುವೆಯ ಬಾಯಿಗಿಂತಲೂ ಸಣ್ಣದು ಯಾವುದು?
2. ಮೌಂಟ್ ಎವರೆಸ್ಟ್ ಶಿಖರವನ್ನು ಕಂಡು ಹಿಡಿಯುವ ಮೊದಲು ಯಾವುದು ಅತ್ಯಂತ ಎತ್ತರದ ಶಿಖರವಾಗಿತ್ತು?
3. ಯಾವ ಶಬ್ದವನ್ನು ಸರಿ ಎಂದರೆ ತಪ್ಪಾಗುತ್ತದೆ ಮತ್ತು ತಪ್ಪು ಎಂದರೆ ಸರಿಯಾಗುತ್ತದೆ
4. ಕೆಲವರು ನಿದ್ರೆಯಲ್ಲಿ ಗೊರಕೆ ಹೊಡೆಯುತ್ತಾರೆ. ಯಾಕೆ?

ಉತ್ತರವನ್ನು 9448120411 ಗೆ ಕಳುಹಿಸಿ ಸರಿ ಉತ್ತರ ಪಡೆಯಿರಿ.

## ಚಂದಾದಾರರಾಗಲು ಈಗ ಅವಕಾಶ

ಸ್ಥಾನಿಕ ಸಂಘದ ಪತ್ರಿಕೆಯ ಅಜೀವ ಚಂದಾದಾರರಾಗಲು ರೂ. 300ನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ. ಶ್ರೀ ಕೃಷ್ಣ ಕನ್ಸಲ್ಟೆನ್ಸಿ, ಮುಖ್ಯರಸ್ತೆ Lic office ಎದುರು, ಸುಳ್ಯ 574239.

ದೂರವಾಣಿ: 9448549732

## ಶೃಂಗೇರಿ ಗುರುದರ್ಶನ ಯಾತ್ರೆ

ದಿನಾಂಕ 21-08-2016 ಭಾನುವಾರ ಶೃಂಗೇರಿ ಗುರುಗಳ ಚಾತುರ್ಮಾಸ್ಯ ಸಂದರ್ಭದ ಗುರುದರ್ಶನ ಯಾತ್ರೆ ಸಂಪನ್ನಗೊಳ್ಳಲಿದೆ. ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ

## ಪ್ರಾಯೋಜಕರಾಗಲು ಸುವರ್ಣ ಅವಕಾಶ

ತಮ್ಮ ಸಂಸ್ಥೆಯ ಜಾಹೀರಾತು ವಿವರ ನೀಡಲು ಅವಕಾಶವಿದೆ. ಸಂಸ್ಥೆಯ ವಿವರ ಹಾಗೂ ಫೋಟೋದೊಂದಿಗೆ ರೂ 500.00 ನೀಡಿ ಪ್ರಾಯೋಜಕರಾಗಬಹುದು.

ಗೌರವಸಂಪಾದಕರು : ಶ್ರೀ ರಾಜಾರಾಮ ಜೋತಿಷ್ಯರು
ಸಂಪಾದಕರು : ಡಾ.ಸದಾಶಿವ ರಾವ್
ಸದಸ್ಯರು : ಶ್ರೀ ಬಯಂಬು ಭಾಸ್ಕರ ರಾವ್
ಶ್ರೀ ಐ.ಕೆ ರಾಮಚಂದ್ರ ರಾವ್
ಶ್ರೀ ಗಿರಿಜಾಶಂಕರ ತುದಿಯಡ್ಕ
ಶ್ರೀ ಜಯರಾಮ ರಾವ್ ಸಂಪಾಜೆ

**if not delivered please Return to the publisher**

PRINTED AND PUBLISHED BY DR.P.SADASHIVA RAO ON BEHALF OF SRI SUBRAHMANYA STHANIKA SAMAJA SEVA SANGHA (R) SULLIA,D.K

AND PRINTED AT SAGAR COMPUTERS & DIGITAL STUDIO SHREERAMPETE , SULLIA 574239

AND PUBLISHED AT SULLIA D.K 574239.